8

# ಜೀವವುಳ್ಳ ನಂಬಿಕೆ (2:14-26)

ಕೊಬ್ಬಿನಾಂಶದ ಬಗ್ಗೆ ತಿಳುಕೊಳ್ಳುವವರಿದ್ದಾರೋ? ಅಮೇರಿಕವು ನಿಜವಾಗಿಯು ಈ ಅಂಶವನ್ನು ಯೋಚಿಸುತ್ತದೆ! ಅಹಾರದ ಅಂಗಡಿಗಳಲ್ಲಿ "ಕಡಿಮೆ - ಕೊಬ್ಬಿನಾಂಶದ" ಆಹಾರ ಮತ್ತು ಪಾನಿಯಗಳಿಗಿಂತ ಹೆಚ್ಚು ಕೊಬ್ಬಿನಾಂಶ ರಹಿತವಾದ ಪಾನಿಯಗಳು ಹೆಚ್ಚಾಗಿ ಮಾರಾಟ ವಾಗುತ್ತವೆ ಎಂದು ತಯಾರಕರು ಹೇಳುತ್ತಾರೆ. ಕೊಬ್ಬಿನಾಂಶ ಎಂದರೇನು? ತಾಂತ್ರಿಕ ವಾಗಿ, ಕಬ್ಬಿನಾಂಶವು ಆಹಾರದ ಶಕ್ತಿಯುತವಾದ ವಸ್ತುವಾಗಿರುತ್ತದೆ. ಪ್ರಾಯೋಗಿಕವಾಗಿ ಹೇಳುವದಾದರೆ ಕೊಬ್ಬಿನಾಂಶವು ಆಹಾರ ಮತ್ತು ಪಾನಿಯಗಳಲ್ಲಿ ಅಶುದ್ಧ ತುಣುಕುಗಳಾಗಿ ಸೇರಿಕೊಂಡು ತೂಕವನ್ನು ಮತ್ತು ದೇಹದ ಬೆಳವಣಿಗೆಯನ್ನುಂಟುಮಾಡುತ್ತದೆ. ಆದರೆ ನೀನು ಕೊಬ್ಬಿನಾಂಶವನ್ನು ನೋಡಿರುವೆಯಾ? ಹೌದು ನೋಡಿರುವದಿಲ್ಲ, ಯಾಕಂದರೆ ಅದನ್ನು ಬರಿಗಣ್ಣಿನಿಂದ ನೋಡುವುದು, ಅಸಾಧ್ಯ. *ಆದರೆ ನಾವೆಲ್ಲರೂ ಅದರ ಪರಿಣಾಮವನ್ನು ನೋಡಿದ್ದೇವೆ!*

ಈ ವಿಧವಾಗಿ ನಂಬಿಕೆಯನ್ನು ಕೊಬ್ಬಿನಾಂಶಕ್ಕೆ ಹೋಲಿಸಬಹುದು. ಕ್ರೈಸ್ತ ಜೀವಿತಕ್ಕೂ ಮತ್ತು ಕ್ರೈಸ್ತರ ಬೋಧನೆಗೂ ನಂಬಿಕೆಯೇ "ಬೀಗದ ಕೈ ಆಗಿರುತ್ತದೆ" (ಎಫೆಸ 2:8, 9; 2 ಕೊರಿಂಥ 5:17; ಇಬ್ರಿಯ 11:6; ರೋಮಾಪುರ 14:23). ಯಾಕೋಬನ ಪ್ರಕಾರ, ನಾವು ನಂಬಿಕೆಯನ್ನು ನೋಡಲಸಾಧ್ಯ, ಆದರೆ ನಂಬಿಕೆಯ ಪರಿಣಾಮವನ್ನು ಸುಲಭ ವಾಗಿ ಗ್ರಹಿಸಬಹುದು. ಅದು ಕಣ್ಣಿಗೆ ಕಾಣುವಂತದ್ದು, ಆ ನಂಬಿಕೆಯಲ್ಲಿ ಇರುವವರ ಬಗ್ಗೆ ಯಾಕೋಬ ಕೇಳಲ್ಪಟ್ಟಿದ್ದನು, ಅವರ ನಂಬಿಕೆಯ ಪರಿಣಾಮವನ್ನು ನೋಡಲು ಅಸಾಧ್ಯವಾ ಗಿತ್ತು. ನಂಬಿಕೆಗೂ ಮತ್ತು ಕ್ರಿಯೆಗೂ ಇರುವ ಸಂಬಂಧವನ್ನು ಯಾಕೋಬನು ನೋಡಲ ಪೇಕ್ಷಿಸಿದನು. ನಂಬಿಕೆಯು ಪ್ರಾಯೋಜಿಸಲ್ಪಡಬೇಕು.

ನಮ್ಮ ಪಾಠದ ಬಗ್ಗೆ ಒಂದು ವಿಶ್ಲೇಷಣೆಯನ್ನು ನೀಡಬೇಕು. ಯಾಕೋಬ 2:14-26, ಈ ವಾಕ್ಯ ಭಾಗದಲ್ಲಿ ಸಂಪೂರ್ಣವಾದ ಅರ್ಥವನ್ನು ಯಾಕೋಬನು ನಮಗೆ ಇಟ್ಟಿದ್ದಾನೆ. ಈ ವಿಷಯದ ಕುರಿತಾಗಿ ಯಾಕೋಬ ಮತ್ತು ಪೌಲ ಇವರ ನಡುವೆ ವಾಗ್ವಾದ ಉಂಟಾಗಿತ್ತು. ರೋಮಾಪುರ 3:28 ಮತ್ತು ಗಲಾತ್ಯ 2:16ರಲ್ಲಿ "ಕ್ರಿಯೆಗಳ" ಮೂಲಕ ರಕ್ಷಣೆಯೆಂಬ ವಿಷಯವನ್ನು ಪೌಲನು ನಂಬಿರಲಿಲ್ಲ; ಆದರೆ, ಯಾಕೋಬ 2:14-26ರಲ್ಲಿ, ಕ್ರಿಯೆಗಳು ಎಷ್ಟು ಪ್ರಾಮುಖ್ಯ ಎಂಬುದಾಗಿ ಯಾಕೋಬನು ಮಾತನಾಡುತ್ತಾನೆ. ಈ ಎರಡು ವ್ಯತ್ಯಾಸಗಳ ಬಗ್ಗೆ ವಿಶ್ಲೇಷಿಸಿ, ಅಲೆಗ್ಸಾಂಡರ ರಾಸ್‌ರವರ ಹೇಳಿಕೆ, "ಅವರಿಬ್ಬರೂ ಕತ್ತಿಯನ್ನು ಹಿಡಿದವ ರಾಗಿ ಪರಸ್ಪರ ಹೋರಾಟಕ್ಕೆ ಇಳಿದಿರುವದಿಲ್ಲ; ಅವರು ಬೆನ್ನಿಗೆ ಬೆನ್ನು ತಗಲಿದವರಾಗಿ ನಿಂತು ಕೊಂಡು ಸುವಾರ್ತೆಯ ವಿವಿಧವಾದ ವೈರಿಗಳನ್ನು ಎದುರಿಸುತ್ತಿದ್ದಾರೆ." ಯೆಹೂದ್ಯ ನೀತಿ ವಂತರೆನಿಸಿಕೊಂಡವರನ್ನು ಪೌಲನು ಎದುರಿಸಿದನು, ಅವರು ಕ್ರಿಯೆಗಳ ಮೂಲಕ ನೀತಿವಂತರಾಗುವರು ಎಂದು ಹೇಳಲು, ಯಾಕೋಬನು ಯೇಸುವಿನ ಸಂಬಂಧದ ವಿಷಯವನ್ನು ಮಾತನಾಡಿ ಆ ಸಂಬಂಧದ ಪರಿಣಾಮವನ್ನು ದಿನನಿತ್ಯದ ಜೀವಿತದಲ್ಲಿ ಅಲಕ್ಷ ಮಾಡಿದವರನ್ನು ಯಾಕೋಬನು ಎದುರಿಸಿದ್ದಾನೆ. ಪೌಲನಿಗೂ ಮತ್ತು ಯಾಕೋಬನಿಗೂ ಪ್ರಾರಂಭದ ಅಂಶದ ಕುರಿತಾಗಿ ವ್ಯತ್ಯಾಸ ಉಂಟಾಯಿತು. ಪೌಲನು ಪಾಪ ಕ್ಷಮೆಯ ಕುರಿತಾಗಿ ಮಾತನಾಡಿ ಇದನ್ನು ಹೊಂದಲು ಸಂಪಾದಿಸಲು, ಗೆದ್ದು ಕೊಳ್ಳಲು ಅಥವಾ ಅದಕ್ಕೆ ಯೋಗ್ಯರಾಗಲು ಮನುಷ್ಯನು ತನ್ನ ಕ್ರಿಯೆಗಳ ಮೂಲಕ ತಾನು ಕ್ರೈಸ್ತನೆಂದು ನಿರೂಪಿಸದೇ

ಹೋದರೆ ಅವನು ಕ್ರಿಸ್ತನಲಿಲ್ಲ ಎಂಬುದಾಗಿ ಪ್ರತಿಪಾದಿಸಿದ್ದಾನೆ. ಆದುದರಿಂದ ಯಾಕೋಬ ಮತ್ತು ಪೌಲರು ಪರಸ್ಪರವಾಗಿ; ಹೋರಾಡದೆ ಒಬ್ಬರಿಗೊಬ್ಬರು ಪ್ರೋತ್ಸಾಹಿಸಿಕೊಂಡಿದ್ದಾರೆ. ಇಲ್ಲಿ ಇಬ್ಬರ ಸಂದೇಶವು ಕ್ರೈಸ್ತರ ಪೂರ್ಣ ನಂಬಿಕೆಗೆ ಅಗತ್ಯವಾಗಿದೆ.

## ನಂಬಿಕೆಯು ನಂಬಿಕೆಯಾಗದೆ ಇರುವಾಗ (2:14-17)

ಬೈಬಲಿನ ಈ ವಾಕ್ಯಭಾಗವು ಒಂದು ಕಠಿಣ ಪ್ರಶ್ನೆಯಾಗಿ ಪ್ರಾರಂಭವಾಗುತ್ತದೆ. ಕ್ರೈಸ್ತರು ಯಾಕೆ ಕ್ರೈಸ್ತರಾಗಿದ್ದಾರೆಂದು ಯೋಚಿಸಬೇಕೆಂದು ಹೇಳಿಕೊಂಡು "ತಕ್ಕ ಕ್ರಿಯೆಗಳಿಲ್ಲದವನಾಗಿದ್ದರೆ ಪ್ರಯೋಜನವೇನು? ಅಂತಹ ನಂಬಿಕೆಯು ಇವನನ್ನು ರಕ್ಷಿಸುವುದೋ?" (2:14). ಕ್ರಿಯೆಗಳ್ಳಿಲ್ಲದ ನಂಬಿಕೆಯ ಕುರಿತಾಗಿ ವಯಕ್ತಿಕವಾದ ಮೌಲ್ಯದಸವಾಲನ್ನು ನೀಡುತ್ತಿದ್ದಾನೆ. ಸಹಜವಾಗಿ, ಯಾಕೋಬನು ವಾಕ್ಯವು "ಹೇಳುತ್ತದೆ" ಎಂದು ಒತ್ತಿ ಹೇಳುತ್ತಿದ್ದಾನೆ. ಸಮರ್ಪಿಸಿಕೊಂಡ ಕ್ರೈಸ್ತನ ಈ ಸುಂದರವಾದ ಅರಿಕೆಗೆ ಲೋಕವು ಸಾಕ್ಷಿಯಾಗಿದೆ. ಅವರ ನಂಬಿಕೆಯ ಮೂಲಕವಾಗಿ ಉಂಟಾದ "ಕ್ರಿಯೆಗಳು" ಎಷ್ಟೋ ಅರ್ಥಗರ್ಭಿತವಾಗಿವೆ? ಅವರ ನಂಬಿಕೆಯು ಕೇವಲ ಪದಗಳಾಗಿದ್ದರೆ, ಅದರಲ್ಲಿ ರಕ್ಷಣೆಯ ಶಕ್ತಿ ಇರುವದಿಲ್ಲವೆಂದು ಯಾಕೋಬನು ತಿಳಿಸುತ್ತಾನೆ.

ಈ ಅಂಶವನ್ನು ಸ್ಪಷ್ಟಪಡಿಸುವದಕ್ಕೆ, ಯಾಕೋಬನು ಒಂದು ಉದಾಹರಣೆ ನೀಡುತ್ತಾನೆ:

> *ಒಬ್ಬ ಸಹೋದರನಿಗೆ ಇಲ್ಲವೇ ಒಬ್ಬ ಸಹೋದರಿಗೆ ಬಟ್ಟೆಯೂ ಆ ದಿನದ ಆಹಾರವೂ ಇಲ್ಲದೆ ಇರುವಾಗ ನಮ್ಮಲ್ಲಿ ಒಬ್ಬನು ಅವರಿಗೆ ದೇಹಕ್ಕೆ ಬೇಕಾದದ್ದನ್ನು ಕೊಡದೆ - ಸಮಾಧಾನದಿಂದ ಹೋಗಿರಿ, ಬೆಂಕಿಕಾಯಿಸಿ ಕೊಳ್ಳಿ, ಹೊಟ್ಟೆತುಂಬಿಸಿಕೊಳ್ಳಿ ಎಂದು ಬರೀ ಮಾತು ಹೇಳಿದರೆ ಪ್ರಯೋಜನವೇನು?* (2:15, 16).

ಒಳ್ಳೇದರ ಕುರಿತು ಒಬ್ಬ ವ್ಯಕ್ತಿಯು ಮಾತನಾಡಬಹುದು, ಆದರೆ ಆಹಾರ ಅಥವಾ ಬಟ್ಟೆಯ ಕುರಿತಾಗಿ ಕ್ರಿಯೆ ತೋರಿಸದೆ ಹೋದರೆ ನಿಜವಾಗಿಯೂ ಅವನು ಏನನ್ನು ಮಾಡಿರುವದಿಲ್ಲ. ಈ ಕುರಿತಾಗಿ ನಮಗೆ ಪಾಪ ಪ್ರಜ್ಞೆಯಾಗಿದೆಯೇ? ರೋಗಿಗಳಿಗಾಗಿ ಹಸಿದವರಿಗಾಗಿ ಮತ್ತು ನಿರಾಶ್ರಿತರಿಗಾಗಿ, ಪ್ರಾರ್ಥನೆ ಮಾಡುವಾಗ ಕ್ರಿಯೆಯಲ್ಲಿ ಏನನ್ನಾದರು ಮಾಡಿದ್ದೇವೋ? ನಾವು ನಂಬಿಕೆಯ ಮಾತುಗಳನ್ನಾಡಿದ್ದೇವೆ ವಿನಃ ಕ್ರಿಯೆಯಲ್ಲಿ ಏನನ್ನು ಮಾಡಿರುವದಿಲ್ಲ? ನಾವು ಹವಾನಿಯಂತ್ರಿತ ತರಗತಿಗಳಲ್ಲಿ ಕುತುಕೊಂಡು ನಮ್ಮ ನಂಬಿಕೆಯ ಮಾತನಾಡಿದರೆ, ಅದು ಬಾಯಿಯ ಮಾತಾಗಿರುತ್ತದೆ ಹೊರತು ಕ್ರಿಯೆಯಾಗಿರುವದಿಲ್ಲ?

ಆದುದರಿಂದ ಯಾಕೋಬನು, "ಕ್ರಿಯೆಗಳಿಲ್ಲದಿದ್ದರೆ ನಂಬಿಕೆಯು ತನ್ನಲ್ಲಿ ಜೀವವಿಲ್ಲದ್ದು" ಎಂದು ತಿಳಿಸಿದ್ದಾನೆ (2:17). ಕ್ರಿಯೆಗಳಿರುವ ವೈಯಕ್ತಿಕವಾದ ನಂಬಿಕೆಯು ಮಾತ್ರ ಬೆಲೆಯುಳ್ಳದ್ದು, ನಿಜವಾದದ್ದು ಮತ್ತು ಜೀವಿಸುವಂತದ್ದಾಗಿರುತ್ತದೆ. ಈ ಮಾತುಗಳಿಂದ, ಯಾಕೋಬನು ಈ ಪುಸ್ತಕದ ಮುಖ್ಯ ಸಂದೇಶವನ್ನು ತಿಳಿಸುತ್ತಿದ್ದಾನೆ - *ಕ್ರಿಯೆಯಲ್ಲಿರುವ ಕ್ರೈಸ್ತತ್ವವು ಮಾತ್ರ ನಿಜವಾದದ್ದಾಗಿರುತ್ತದೆ.*

## ಒಂದು ಪ್ರಶ್ನೆಯು ಉತ್ತರಿಸಲ್ಪಟ್ಟಿದೆ (2:18-20)

ಈ ಅಂಶದ ಕುರಿತಾಗಿ, ಒಬ್ಬ ವಿರೋಧಿಯು ಅವನ ಕಾರಣಗಳಿಗೆ ಇರುವಂತ ಅಭ್ಯಾಂತರಗಳ ಊಹೆಯ ಕುರಿತಾಗಿ ಯಕೋಬನು ಪರಿಚಯಸುತ್ತಿದ್ದಾನೆ. ಅಬ್ಯಂತರ ಮಾಡುವವನ ವಾಗ್ವಾದವು ಈ ರೀತಿ ಇರಬಹುದು: "ನಾವೆಲ್ಲರೂ ವ್ಯತ್ಯಾಸವುಳ್ಳವರಾ ಗಿದ್ದೇವೆ - ಮತ್ತು ಇದನ್ನು ನೀನು ಯಥಾರ್ಥವಾಗಿ ಒಪ್ಪಿಕೊಳ್ಳುತ್ತಿ, ಕೆಲವರು ಇತರರಿಗಿಂತ

ಹೆಚ್ಚು ತೋರಿಸಿ ಕೊಳ್ಳುವವರಾಗಿರುತ್ತಾರೆ. ಇನ್ನು ಕೆಲವರು ಹೆಚ್ಚು ಗಂಭಿರವಾಗಿರುತ್ತಾರೆ. ನೀನು ಆನಂದವಾಗಿರುವದರಿಂದ ಕ್ರಿಯೆಗಳ ಮುಖಾಂತರ ನಿನ್ನ ನಂಬಿಕೆಯನ್ನು ಹೆಚ್ಚಾಗಿ ತೋರಿಸಬಹುದು. ಇನ್ನೂ ಕೆಲವರು ನಂಬಿಕೆಯನ್ನು ನಮಗಾಗಿಯೇ ಉಳಿಸಿಕೊಳ್ಳುತ್ತೇವೆ, ಆದಾಗ್ಯೂ ಅದು ನಂಬಿಕೆ ವಾಗ್ವಾದವು ಸಂಪೂರ್ಣವಾಗಿ ಅಪಾರ್ಥದ ಮೇಲೆ ಕಟ್ಟಲ್ಪಟ್ಟಿದೆ." ಎಂಬುದು ಯಾಕೋಬನ ಉತ್ತರವಾಗಿದೆ. ನಂಬಿಕೆ ಮತ್ತು ಕ್ರಿಯೆಗಳನ್ನು ಪ್ರತ್ಯೇಕ ಮಾಡಲಾಗದು ಯಾಕಂದರೆ ಇದರಲ್ಲಿ ನಮ್ಮ ಕ್ರೈಸ್ತತ್ವವು ಅಡಗಿರುತ್ತದೆ. ದೇವರು ಅವೆರಡನ್ನು ಕೂಡಿಸಿದ್ದಾನೆ. ಆದುದರಿಂದ, ಒಬ್ಬನು ಉತ್ತಮವಾದ ನಂಬಿಕೆಯನ್ನು ಹೊಂದಿದ್ದಾನೆಂಬುದಾಗಿ ಮತ್ತು ಇತರರು ಉತ್ತಮವಾದ ಕ್ರಿಯೆಗಳನ್ನು ಹೊಂದಿದ್ದಾರೆ ಎಂಬ ಅರ್ಥವಲ್ಲ. ನಂಬಿಕೆ ಮತ್ತು ಕ್ರಿಯೆ ಒಟ್ಟಿಗೆ ನಡೆಯುತ್ತದೆ! ವಚನ 18ರಲ್ಲಿ ಯಾಕೋಬನು ನಂಬಿಕೆಯ ಕುರಿತಾಗಿ ಅಭ್ಯಾಂತರ ಮಾಡುವವರಿಗಾಗಿ ನಂಬಿಕೆಯನ್ನು ತೋರಿಸಿರಿ ಎಂದು ತಾತ್ಪರ್ಯವನ್ನು ನೀಡಿ ದ್ದಾನೆ. ಯಾಕಂದರೆ ನಂಬಿಕೆಯು ಕ್ರಿಯೆಗಳಿಂದಲೇ ನಂಬಿಕೆಯೆಂದು ತಿಳಿದುಬರುತ್ತದೆ!

ಕೊನೆಯದಾಗಿ, ಯಾಕೋಬನು ಈ ಅಂಶವನ್ನು ಸ್ಪಷ್ಟಪಡಿಸಲು ದೆವ್ವಗಳ ಉದಹರಣೆಯನ್ನು ಉಪಯೋಗಿಸುತ್ತಿದ್ದಾನೆ (2:19). ಅಭ್ಯಾಂತರ ಮಾಡುವವನು ಏನನ್ನು ನಂಬಿದ್ದಾನೆ? ಅವರು ದೇವರ ಇರುವಿಕೆಯನ್ನು ಮತ್ತು ಯೇಸುವಿನ ದೈವತ್ವವನ್ನು ನಂಬಿದ್ದಾರೆ. *ಆದರೇನು?* ದೆವ್ವಗಳು ಸಹ ಹಾಗೆಯೇ ನಂಬುತ್ತವೆ! ದೇವರು ಬಯಸುವ ನಂಬಿಕೆಯು ಕೇವಲ ನಂಬುವದು ಮತ್ತು ನಡುಗುವುದು ಮಾತ್ರವಾಗಿರುವದಿಲ್ಲ. ಒಬ್ಬ ವ್ಯಕ್ತಿಯು ತನ್ನ ಮನಸ್ಸಿನಲ್ಲಿ ಉಲ್ಲಾಸಗೊಳ್ಳಬಹುದು ಮತ್ತು ಅವನ ಹೃದಯದಲ್ಲಿ ಯೋಚನೆಗಳು ಉಂಟಾಗಬಹುದು ಅದಾಗ್ಯೂ ನಿರಂತರವಾಗಿ ಕಳೆದು ಹೋಗಿದ್ದಾನೆ. ದೇವರು ಬಯಸುವಂತ ನಂಬಿಕೆ ಉತ್ತಮವಾದದ್ದನ್ನು ಒಳಗೊಂಡಿರುತ್ತದೆ, ಆ ನಂಬಿಕೆಯು ಕ್ರಿಯೆಯಿಂದ ಕಾಣುವಂತದ್ದು - ವಿಧೇಯವಾದದ್ದು ಬದಲಾದ ಜೀವಿತವು ಆಗಿರುತ್ತದೆ.

## ಇಬ್ರಿಯರ ಇತಿಹಾಸದಿಂದ ಖಚಿತಪಡಿಸಿಕೊಳ್ಳುವದು (2:21-26)

ಹಳೆ ಒಡಂಬಡಿಕೆಯ ಜನರಿಂದ ದೇವರು ಬಯಸಿದಂತ ವಿಷಯಗಳ ಕುರಿತಾಗಿ ಯಾಕೋಬನು ವಿಶೇಷವಾದ ಒಂದು ರುಜುವಾತನ್ನು ತಿಳಿಸುತ್ತಿದ್ದಾನೆ. ಯಾಕೋಬ 2:20ರಲ್ಲಿ ತನ್ನ ಊಹೆಯಲ್ಲಿರುವ ಪ್ರತಿಪಾದನೆಗೆ ಅವಶ್ಯವಿರುವ ವಾಕ್ಯವನ್ನು ಪರಿಚಯಿಸುತ್ತಿದ್ದಾನೆ. ಈ ಎರಡು ಸಾಕ್ಷಿ ಮತ್ತು ದೃಷ್ಟಾಂತದಲ್ಲಿ, ವ್ಯಕ್ತಿಗಳು ಕೇವಲ ಭಾವನಾತ್ಮಕ ಆಲೋಚನೆಗಳನ್ನು ಹೊಂದಿರದೆ, ಸ್ವಾಭಾವಿಕವಾದ ಮಾನವೀಯ ಕರುಣೆಯನ್ನು ಮಾತ್ರ ಹೊಂದಿರದೆ ಅವರ ನಂಬಿಕೆಯನ್ನು ಕ್ರಿಯೆಯ ಮೂಲಕ ರುಜುವಾತು ಪಡಿಸಬೇಕು.

ವಚನ 21 ರಿಂದ 24ರವರೆಗೆ ಅಬ್ರಹಾಮನ ಕುರಿತಾದ ಸಾಕ್ಷಾಧಾರಗಳನ್ನು ಯಾಕೋಬನು ತಿಳಿಸಿದ್ದಾನೆ. ಅಬ್ರಹಾಮನು "ಯೆಹೂದ್ಯ ಜನಾಂಗಕ್ಕೆ ತಂದೆಯಾಗಿದ್ದನು," ಮತ್ತು "ಅವನು ನಂಬಿಗಸ್ತರ ತಂದೆಯಾಗಿದ್ದಾನೆ." ಅವನು ದೇವರಲ್ಲಿ ವಿಶ್ವಾಸವಿಡುವದರಲ್ಲಿಯೂ ವಿಧೇಯತೆಯಲ್ಲಿಯೂ ದೇವರ ನಂಬಿಕೆಯಲ್ಲಿಯೂ ಬೆಳವಣಿಗೆ ಹೊಂದುವದಕ್ಕೆ ಪ್ರಯಾಸಪಟ್ಟನು. ಅವನ ಜೀವಿತದ ಪ್ರಾರಂಭದಲ್ಲಿ ಪಟ್ಟಂತ ಪ್ರಯಾಸಗಳ ಸಾಕ್ಷಿಯನ್ನು ಕಾಣುತ್ತೇವೆ: ಜೀವನ ಮಧ್ಯದಲ್ಲಿ ದೇವರಿಗೆ ವಿಧೇಯನಾಗಿದ್ದನು, ಪಾಲಿಸ್ಟೀನಿನ ಕ್ಷಾಮದಲ್ಲಿ ಐಗುಪ್ತಕ್ಕೆ ಓಡಿ ಹೋದನು, ಐಗುಪ್ತದಲ್ಲಿ ಸಾರಳ ಸಂಬಂಧದ ಕುರಿತಾಗಿ ಸುಳ್ಳನ್ನು ಹೇಳಿ ದನು ಮತ್ತು ತನ್ನ ಹೆಂಡತಿಗೆ ಮಗುವಾಗುವ ವಿಷಯದಲ್ಲಿ ನಗುವನ್ನು ತೋರಿದನು: "ಅಬ್ರಹಾಮನು ನಂಬಿಕೆಯಿಂದ ಮಾತ್ರ ರಕ್ಷಿಸಲ್ಪಡದೇ ಕ್ರಿಯೆಯಿಂದಲೂ ರಕ್ಷಿಸಲ್ಪಟ್ಟನು ಎಂಬುದಾಗಿ ಕೆಲವರು ಯಾಕೋಬನ ಮಾತನ್ನು ದೃಢೀಕರಿಸಿದ್ದಾರೆ. ಅದು ಕ್ರಿಯೆಯಲ್ಲಿರುವ ನಂಬಿಕೆಯಾಗಿರುತ್ತದೆ." ಅಬ್ರಹಾಮನು ತನ್ನ ಜೀವಿತದಲ್ಲಿ ನಂಬಿಕೆಯನ್ನು ಕಾರ್ಯಗತವಾಗಿ ತೋರ್ಪಡಿಸಿದ್ದರಿಂದ ಈ ವಿಷಯದಲ್ಲಿ ಯಾವುದೇ ಸಂದೇಹವಿರುವದಿಲ್ಲ.

ಎರಡನೆಯದಾಗಿ ರಾಹಬಳು ತೋರ್ಪಡಿಸಿದ ನಂಬಿಕೆಯಿಂದುಂಟಾದ ಕ್ರಿಯೆಯ ಉದಾಹರಣೆಯನ್ನು ಯಾಕೋಬನು ತೋರಿಸುತ್ತಿದ್ದಾನೆ. ರಾಹಬಳು "ಸತ್ತಂತ" ನಂಬಿಕೆಯನ್ನು ಹೊಂದಿದ್ದಳೆ, ಅಥವಾ ಜ್ಞಾನದ ಅನುಭವವನ್ನು ಹೊಂದಿದ್ದಳೆ, ಮತ್ತು ಗೂಢಾಚಾರರಿಗೆ ಏನನ್ನೂ ಮಾಡಲಿಲ್ಲವೇ? ಅವಳಿಗಿದ್ದಂತ ನಂಬಿಕೆಯು ಅವಳ ಮನಸ್ಸಿಗೆ ಆನಂದವನ್ನುಂಟುಮಾಡಿ ಮತ್ತು ಆಕೆಯ ಭಾವೋದ್ವೇಗವನ್ನು ಎಚ್ಚರಿಸಿದಾಗ್ಯೂ ಆಕೆಯು ಗೂಢಾಚಾರರಿಗೆ ಏನನ್ನು ಮಾಡಲಿಲ್ಲವೇ? ಈ ಕಥೆಯ ಸೌಂದರ್ಯವೇನೆಂದರೆ ರಾಹಾಬಳು "ಜೀವವುಳ್ಳ" ನಂಬಿಕೆಯನ್ನು ಹೊಂದಿದ್ದಳು. ಅವಳ ಕ್ರಿಯೆಯ ಮೂಲಕವಾಗಿ ನಂಬಿಕೆಯನ್ನು ರಾಜುವಾತು ಪಡಿಸಿದಳು. ಇಸ್ರಾಯೇಲ್ಯರ ಯೆಹೋವನಲ್ಲಿ ವಿಶ್ವಾಸವಿಟ್ಟು; ಗೂಢಾಚಾರರನ್ನು ಅಡಗಿಸಿ ಮತ್ತು ಬೇರೆ ಮಾರ್ಗದಿಂದ ಅವರನ್ನು ಕಳುಹಿಸಿಕೊಟ್ಟಳು.

## ಮುಕ್ತಾಯ

ಯಾಕೋಬನು ತನ್ನ ಚರ್ಚೆಯನ್ನು ಈ ರೀತಿಯಾಗಿ ಸಮಾಪ್ತಿಮಾಡಿದ್ದಾನೆ. "ಆತ್ಮವಿಲ್ಲದ ದೇಹವು ಸತ್ತದ್ದಾಗಿರುವ ಪ್ರಕಾರವೇ ಕ್ರಿಯೆಗಳಿಲ್ಲದ ನಂಬಿಕೆಯೂ ಸತ್ತದ್ದೇ" (2:26). ಜನರ ಮುಂದೆ ನಿಂತಿರುವ ಒಬ್ಬ ವಕೀಲನಂತೆ ಯಾಕೋಬನು ವಾಗ್ವಾದದ ಸಂಕ್ಷಿಪ್ತ ವರದಿಯನ್ನು ನೀಡುತ್ತಿದ್ದಾನೆ. ದೇಹ ಮತ್ತು ಆತ್ಮ ಪ್ರತ್ಯೇಕವಾದಾಗ, ಮರಣ ಮತ್ತು ನಾಶನದ ಪರಿಣಾಮವುಂಟಾಗುತ್ತದೆ; ಅದೇ ರೀತಿಯಾಗಿ, ನಂಬಿಕೆಯಿಂದ ಕ್ರಿಯೆಯು ಪ್ರತ್ಯೇಕಗೊಂಡಾಗ, ನಂಬಿಕೆಯು ಸತ್ತು ನಾಶವಾಗುತ್ತದೆ.

ಕ್ರೈಸ್ತತ್ವವು ಸತ್ಯವಾಗಿರಬೇಕಾದರೆ ಅದು *ಪ್ರಾಯೋಗಿಕವಾಗಿಯೂ ಮತ್ತು ಕ್ರಿಯೆಯಲ್ಲಿಯೂ* ಇರತಕ್ಕದ್ದೆಂದು ಯಾಕೋಬನು ತಿಳಿಸುತ್ತಾನೆ!